## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 470 (543) |
| ವಿಧಾನ ಪರಿಷತ್ ಸದಸ್ಯರ ಹೆಸರು | : ಶ್ರೀ. ಹೆಚ್.ಪಿ. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 14.08.2025 |
| ಉತ್ತರಿಸಬೇಕಾದ ಸಚಿವರು | : ಮಾನ್ಯ ಉಪ ಮುಖ್ಯ ಮಂತ್ರಿಗಳು |

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಭಾದಿತರಾಗಿರುವ ಬಾಗಲಕೋಟೆ ಸಂತ್ರಸ್ಥರಿಗೆ ನವನಗರದಲ್ಲಿ ಯುನಿಟ್-1, ಯುನಿಟ್-2 ರಲ್ಲಿ ಹಂಚಿಕೆಯಾಗಿರುವ ನಿವೇಶನಗಳಿಗೆ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದಿಂದ ಇ-ಆಸ್ತಿ ನೊಂದಣಿ ಮಾಡಿಸಿಕೊಳ್ಳುವುದು ಕಡ್ಡಾಯಗೊಳಿಸಿ ಸರ್ಕಾರ ಆದೇಶಿಸಿದ್ದು, ಸಂತ್ರಸ್ಥರು ಬ್ಯಾಂಕಿನಿಂದ ಸಾಲ ಪಡೆಯಲು ನಿವೇಶನ ಪರಭಾರೆ ಮಾಡಲು ಬಿ.ಟಿ.ಡಿ.ಎಗೆ ಇ-ಅಸ್ತಿಗಳ ಸೃಜನೆ ಮಾಡಲು ಅವಶ್ಯಕ ಸಿಟಿಜನ್-ಲಾಗಿನ್ ಇರುವುದರಿಂದ ಇ-ಆಸ್ತಿ ದಾಖಲೆ ದೊರೆಯಲಾರದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಹೌದು.<br><br>ದಿನಾಂಕ:02.09.2024ರ ಸರ್ಕಾರದ ಕಂದಾಯ ಇಲಾಖೆಯ ಆದೇಶದಲ್ಲಿ ಯುನಿಟ್-1 & 2ರಲ್ಲಿನ ನಿವೇಶನಗಳನ್ನು ಹಂಚಿಕೆ ಮಾಡಿ, ನೋಂದಣಿಗೊಳಿಸಿದ ಆಸ್ತಿಗಳನ್ನು ಕಾವೇರಿ-02 ತಂತ್ರಾಂಶದಲ್ಲಿ ಇ-ಆಸ್ತಿ ದಾಖಲೆ ಮಾಡುವುದಾಗಿರುತ್ತದೆ.<br><br>ಅದರಂತೆ, ನೋಂದಣಿಗೊಳಿಸಿದ ಆಸ್ತಿಗಳನ್ನು ಕಾವೇರಿ-02 ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಿದಾಗ "ಗುತ್ತಿಗೆ ಹಾಗೂ ಕ್ರಯಪತ್ರ" ಅಂತಾ ಆಯ್ಕೆ ಮಾಡಿದಲ್ಲಿ ಮಾಲೀಕರ ಕಾಲಂ ರಲ್ಲಿ "CE, BTDA, ಬಾಗಲಕೋಟೆ" ಎಂದು ಹಾಗೂ ಅನುಭವದಾರ ಕಾಲಂ ನಲ್ಲಿ "ಸಂತ್ರಸ್ಥರ" ಹೆಸರು ದಾಖಲಾಗುತ್ತಿದೆ. ಇದರಿಂದ ಶುದ್ಧ ಕ್ರಯ ಪತ್ರ ನೀಡುವ ಸಮಯದಲ್ಲಿ ಇತ್ತೀಚಿನ ನಿವೇಶನ ಮೌಲ್ಯದ ಶೇ.1% ರಷ್ಟು ಮೊತ್ತವನ್ನು ಸಂತ್ರಸ್ಥರು/ಸಾರ್ವಜನಿಕರು ಭರಿಸಬೇಕಾಗಿರುವುದರಿಂದ ಇದು ಸಂತ್ರಸ್ಥರಿಗೆ ಹೆಚ್ಚುವರಿ ಆರ್ಥಿಕ ಹೊರೆಯಾಗುತ್ತಿದೆ. |
| (ಆ) | ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಿಟಿಜನ್-ಲಾಗಿನ್ ಸೃಜನೆ ಮಾಡಿ ಸಂತ್ರಸ್ಥರಿಗೆ ಇ-ಆಸ್ತಿ ದೊರೆಯಲು ಮಾಡುವ ನಿಟ್ಟಿನಲ್ಲಿ ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು? (ವಿವರ ನೀಡುವುದು) | ಈ ನಿಟ್ಟಿನಲ್ಲಿ ಬಾಗಲಕೋಟೆ ನಗರಸಭೆಗೆ ಕಾವೇರಿ-2 ತಂತ್ರಾಂಶದಲ್ಲಿ ಸಿಟಿಜನ್-ಲಾಗಿನ್ ನೀಡಿದ ಮಾದರಿಯಲ್ಲಿಯೇ ಬಿಟಿಡಿಎ ಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಕಾವೇರಿ-2 ತಂತ್ರಾಂಶದಲ್ಲಿ ಸಿಟಿಜನ್-ಲಾಗಿನ್ ಸೃಜನೆ ಮಾಡುವ ಕುರಿತು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಇವರ ಹಂತದಲ್ಲಿ ಪರಿಶೀಲನೆಯಲ್ಲಿದೆ. |

ಸಂಖ್ಯೆ:ಜಸಂಇ 56 ಡಬ್ಲ್ಯೂಬಿಎಂ 2025

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು